ISSN: 2249-2429 Volume : 9, Issue : 2, Pages 52, 7th Sept. 2019 Annual Subscription ₹.500/-

Dept of Education

M.G.V.C. Arts, Commerce & Science College MUDDEBIHAL-586212 Dt: Vijayapur.

# ಶಿಕ್ಷಣ ಸೌಧ

ತ್ರೈಮಾಸಿಕ ಶಿಕ್ಷಣ ಮತ್ತು ಸಂಶೋಧನಾ ಪತ್ರಿಕೆ

**SHIKSHAN SOUDHA** *A Quarterly Education and Research Journal*






## ದಕ್ಷಿಣ ಕನ್ನಡ ಭಾಗ ಕತೆಗಳಲ್ಲಿ ಸ್ಥಳೀಯ ಪ್ರಜ್ಞೆಯ ಸ್ವರೂಪ



## ಪರಿಶಿಷ್ಟ ಜಾತಿಯ ಜನರು ಮತ್ತು ಅವರ ರಾಜಕೀಯ ಜೀವನ

## ಸ್ವಾತಂತ್ರ್ಯ ಹೋರಾಟದ ಮೇಲೆ ಕನ್ನಡ ಸಾಹಿತ್ಯದ ಪ್ರಭಾವ





## ವ್ಯಕ್ತಿತ್ವ, ಸಂವೇಗಾತ್ಮಕ ಪರಿಪಕ್ವತೆ ಮತ್ತು ಶಾಲಾ ಹೊಂದಾಣಿಕೆ ಕುರಿತು ಒಂದು ತೌಲನಿಕ ಅಧ್ಯಯನ

Internal Quality Assurance Cell
M.G.V.C. Arts, Commerce & Science College
MUDDEBIHAL-586212 Dist. Vijayapur

# ಶಿಕ್ಷಣ ಸೌಧ

ತ್ರೈಮಾಸಿಕ ಶಿಕ್ಷಣ ಮತ್ತು ಸಂಶೋಧನ ಪತ್ರಿಕೆ

7ನೇ ಸಪ್ಟಂಬರ 2019 ಸಂಪುಟ : 9 ಸಂಚಿಕೆ : 2

ಪ್ರಕಾಶಕರು :

ಜಯದೇವ ಮೈ. ಮೆಣಸಗಿ

ವಿದ್ಯಾನಿಧಿ ಪ್ರಕಾಶನ, ಗದಗ

ಮಾಜಿ ಸಿಂಡಿಕೇಟ್ ಸದಸ್ಯರು, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ

ಸಂಪಾದಕರು :

ಡಾ. ಎನ್. ಬಿ. ಕೊಂಗವಾಡ

ಸಹಸಂಪಾದಕರು :

ಡಾ. ಎಸ್. ಬಿ. ಯಾದವಾಡ



ಸಂಪಾದಕ ಮಂಡಳಿ :

- ಡಾ. ಶ್ರೀಮತಿ ಎನ್. ಲಕ್ಷ್ಮಿ
  ಡೀನ್ ಶಿಕ್ಷಣ ನಿಖಾಯ ಕರಾಮುವಿ, ಮೈಸೂರು.
- ಡಾ. ಎಸ್. ಎಸ್. ಪಾಟೀಲ
  ಡೀನ್ ಶಿಕ್ಷಣ ನಿಖಾಯ ಕುವೆಂಪು ವಿ.ವಿ. ಶಿವಮೊಗ್ಗ
- ಡಾ. ಎ. ವ್ಹಿ. ಬಮಗೊಂಡ
  ಬಿ.ಎಲ್.ಡಿ.ಇ. ಶಿಕ್ಷಣ ಮಹಾವಿದ್ಯಾಲಯ, ವಿಜಯಪುರ
- ಡಾ. ಶ್ರೀಮತಿ ಶೋಭಾ ನಾಯ್ಕರ
  ಸರಕಾರಿ ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯ, ಬೆಳಗಾವಿ.
- ಡಾ. ಬಿ. ಎಲ್. ಲಕ್ಕಣ್ಣವರ
  ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ, ವಿಜಯಪುರ
- ಡಾ. ಜಗನ್ನಾಥ್ ಕೆ. ಢಾಂಗೆ
  ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ, ಶಿವಮೊಗ್ಗ



## Shikshan Soudha

*A Quarterly Education and Research Journal*

**Vidyanidhi Prakashana ®**
**Sri Sivakumar Agency ®**
Station Road, Near Mahendrakar Circle,
GADAG-582 101 Dist. : Gadag
Karnataka State (India)
Phone : 08372-237527, 277527
email : shikshansoudha@gmail.com


The views expressed in the articles side are the individual opinions of the authors and they in no way represent or reflect the opinion of SHIKSHAN SOUDHA nor does SHIKSHAN SOUDHA subscribe to these views in no way. All disputes are subject to the jurisdiction of Gadag court only.

ಶಿಕ್ಷಣ ಸೌಧ

# ಅಂತರಂಗ Inside

## ಸೈದ್ಧಾಂತಿಕ (Articles)


05 ದಕ್ಷಿಣ ಕನ್ನಡ ಭಾಗ ಕತೆಗಳಲ್ಲಿ ಸ್ಥಳೀಯ ಪ್ರಜ್ಞೆಯ ಸ್ವರೂಪ – ಸುಬ್ರಹ್ಮಣ್ಯ ಸಿ.

07 ಮುದ್ದೇಬಿಹಾಳ ತಾಲೂಕಿನಲ್ಲಿ ಉನ್ನತ ಶಿಕ್ಷಣ ಪಡೆಯುವಲ್ಲಿ ವಿದ್ಯಾರ್ಥಿಗಳ ಸಮಸ್ಯೆಗಳು – ಪ್ರೊ. ಎಸ್. ಎಸ್. ಹೂಗಾರ

08 ಜನಪದ ಸೊಗಡಿನ ಸಣ್ಣಾಟ : ನಿಜಗುಣ ಶಿವಯೋಗಿ –ರಾಜು ಕುಂಬಾರ

12 ಸಂಗೀತದ ಪ್ರಚಾರದಲ್ಲಿ ಅಂತರ್ಜಾಲ ಹಾಗೂ ಮೊಬೈಲ್ 'ಆಪ್'ಗಳ ಪಾತ್ರ – ವೀಣಾ ಬಡಿಗೇರ

14 ತಬಲಾ ವಾದ್ಯದಲ್ಲಿನ ಜಾತಿಗಳ ವೈಶಿಷ್ಟ್ಯತೆ – ನಾಗಭೂಷಣ ಎಸ್. ಗುಡ್ಡದಮಠ, ಡಾ ಮೃತ್ಯುಂಜಯ ಅಗಡಿ

16 ಕನ್ನಡ ಸಾಹಿತ್ಯಾವಲೋಕನ – ಪ್ರೊ. ಎಸ್. ಎಂ. ಮುಳ್ಳೂರ

18 ಆಲಾಪ ಪದ್ಧತಿಯ ಆಧಾರ – ಸ್ವಸ್ಥಾನ ನಿಯಮ – ವಾಸಂತಿ ಮ. ಮುತುಗೂರ, ಡಾ. ವೀರಣ್ಣ ಹೂಗಾರ

19 ಬೆಳವಡಿ ಸಂಸ್ಥಾನ ಹಾಗೂ ಮರಾಠಿಗರ ಮಧ್ಯ ನಡೆದ ಯುದ್ಧದ ದಾಖಲೆಗಳು – ಬಾಳಪ್ಪ ಈ. ಚಿನಗುಡಿ

28 ಕಡೋಲಿ ಜಾತ್ರೆ – ನಿಂಬಣ್ಣ ಎನ್. ಗೊರವರ, ಎಫ್.ಟಿ.ಹಳ್ಳಿಕೇರಿ

31 ಚಿತ್ರ ಕಲೆಯಲ್ಲಿ ವಿಭಿನ್ನ ಬೀದಿ ಬದಿ ವ್ಯಾಪಾರಿಗಳ ವಿಶ್ಲೇಷಣೆ – ಹೇಮ ಜಿ., ಡಾ. ಶೋಭ ಸಿ.


## ಸಂಶೋಧನೆಗಳು (Research Articles)


35 "ವ್ಯಕ್ತಿತ್ವ, ಸಂವೇಗಾತ್ಮಕ ಪರಿಪಕ್ವತೆ ಮತ್ತು ಶಾಲಾ ಹೊಂದಾಣಿಕೆ ಕುರಿತು ಒಂದು ತೌಲನಿಕ ಅಧ್ಯಯನ" – ಡಾ. ಆರ್. ರುದ್ರಾರಾಧ್ಯ

38 ಸ್ವಾತಂತ್ರ್ಯ ಹೋರಾಟದ ಮೇಲೆ ಕನ್ನಡ ಸಾಹಿತ್ಯದ ಪ್ರಭಾವ : ಒಂದು ಅಧ್ಯಯನ – ಡಾ. ಮಲ್ಲಯ್ಯ ಸಂಡೂರು

43 "ಪರಿಶಿಷ್ಟ ಜಾತಿಯ ಜನರು ಮತ್ತು ಅವರ ರಾಜಕೀಯ ಜೀವನ" ಒಂದು ಸಮಾಜಶಾಸ್ತ್ರಿಯ ಅಧ್ಯಯನ – ಕಾಂಬಳೆ ರಾಜು ವಸಂತ, ಡಾ. ಶಾಮಲಾ ಭೀ. ದಾಸೋಗ


## ಶಿಕ್ಷಣ ತಜ್ಞರು (Educationists)


48 ಅರವಿಂದ ಘೋಷ – ಎಸ್. ಬಿ. ಯಾದವಾಡ



Co-ordinator,
Internal Quality Assurance Cell
M.G.V.C. Arts, Commerce & Science College
MUDDEBIHAL-586212. Dist: Vijayapur.

PRINCIPAL,
M. G. V. C. Arts, Com. & Science College
MUDDEBIHAL - 586212

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

G.V.C. Arts, Commerce & Science College MUDDEBIHAL -586212 Dt: Vijayapur.

# ಮುದ್ದೇಬಿಹಾಳ ತಾಲೂಕಿನಲ್ಲಿ ಉನ್ನತ ಶಿಕ್ಷಣ ಪಡೆಯುವಲ್ಲಿ ವಿದ್ಯಾರ್ಥಿಗಳ ಸಮಸ್ಯೆಗಳು

✍ ಪ್ರೊ. ಎಸ್. ಎಸ್. ಹೂಗಾರ, ಶಿಕ್ಷಣ ಸಹಾಯಕ ಉಪನ್ಯಾಸಕರು, ಕಲಾ, ವಾಣಿಜ್ಯ ಮತ್ತು ವಿಜ್ಞಾನ ಮಹಾವಿದ್ಯಾಲಯ, ಮುದ್ದೇಬಿಹಾಳ.

''ವಿದ್ಯೆಯಿಲ್ಲದವನ ಮುಖವು ಹಾಳೂರ ಹದ್ದಿನಂತಿಕ್ಕು'' ಎಂಬಂತೆ ವಿದ್ಯೆ ಪ್ರತಿಯೊಬ್ಬನ ಹಕ್ಕು. ಅದರಿಂದ ಜೀವನದ ಗತಿಯೇ ಬದಲಾಗುತ್ತದೆ. ಭವಿಷ್ಯದ ನಿರ್ಮಾಣಕ್ಕೆ ವಿದ್ಯೆಯೇ ಆಧಾರ. ಕೇವಲ ಜ್ಞಾನವನ್ನು ಪಡೆದುಕೊಳ್ಳುವದಷ್ಟೇ ಅಲ್ಲ, ಜ್ಞಾನದ ಜೊತೆ ಜೊತೆಗೆ ತನ್ನ ಬದುಕನ್ನು ರೂಪಿಸಿಕೊಂಡು ಸುಂದರವಾದ ಬಾಳನ್ನು ನಡೆಸಲು ಸ್ವಾವಲಂಬಿ ಜೀವನವನ್ನು ಸಾಗಿಸಲು ಉನ್ನತ ಶಿಕ್ಷಣವು ಬೇಕೆ ಬೇಕು. ಇದರ ಜೊತೆಗೆ ತನ್ನಲ್ಲಿರುವ ಆಗಾಧ ಸಾಮರ್ಥ್ಯ, ಬುದ್ಧಿಶಕ್ತಿ, ಪಾಂಡಿತ್ಯವನ್ನು ಒರೆಗಚ್ಚುವ ಸಂಶೋಧನಾ ಪ್ರವೃತ್ತಿ , ಭಾಷಾ ಸಾಮರ್ಥ್ಯ, ಬರವಣಿಗೆ, ವಿಷಯದ ವ[illegible]ನ ಪಾಂಡಿತ್ಯ, ಪೂರ್ಣ ಭಾಷಣ ಅಭಿವ್ಯಕ್ತಿಯನ್ನು ಪ್ರದರ್ಶಿಸಲು ಉನ್ನತ ಶಿಕ್ಷಣ ಬೇಕೆಬೇಕು. ಒಬ್ಬ ವಿದ್ಯಾರ್ಥಿಯ ಜೀವನವು ಪರಿಪೂರ್ಣ ವಾಗಬೇಕಾದರೆ ಉನ್ನತ ಶಿಕ್ಷಣವು ಅತೀ ಅವಶ್ಯ. ಶಿಕ್ಷಣವೆಂದರೆ ಅದು ನಿಂತ ನೀರಲ್ಲ, ಸದಾ ಪರಿಶುದ್ಧವಾಗಿ ಹರಿಯುವ ನೀರಿದ್ದಂತೆ, ಅದು ಜೀವನ ಪೂರ್ತಿ ನಡೆಯುವ ಪ್ರಕ್ರಿಯೆ. ಪ್ರಾಥಮಿಕ ಮತ್ತು ಮಾಧ್ಯಮಿಕ ಹಂತಗಳು ಅಕ್ಷರ ಜ್ಞಾನದ ಜೊತೆಗೆ ವಿಷಯ ಜ್ಞಾನವನ್ನು ನೀಡಿದರೆ ಉನ್ನತ ಶಿಕ್ಷಣವು ಭವಿಷ್ಯದ ನಿರ್ಮಾಣಕ್ಕೆ ದಾರಿ ದೀಪವಾಗುತ್ತದೆ. ಆದ್ದರಿಂದ ಇಂತಹ ಉನ್ನತ ಶಿಕ್ಷಣವನ್ನು ಪಡೆಯುವಲ್ಲಿ ಇಂದಿನ ವಿದ್ಯಾರ್ಥಿಗಳು ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಆ ಸಮಸ್ಯೆಗಳು ಯಾವವು ಎಂಬುದನ್ನು ಕೂಲಂಕುಶವಾಗಿ ನೋಡೋಣ.

ಹಿಂದಿನ ಕಾಲದಲ್ಲಿ ''ಛಡಿ ಚಂಚಂ ವಿದ್ಯಾ ಗಂಗಂ'' ಎಂಬತೆ ಇತ್ತು ಆದರೆ ಇಂದಿನ ಕಾಲದಲ್ಲಿ ವಿದ್ಯಾರ್ಥಿಗೆ ಶಿಕ್ಷೆಯನ್ನು ನೀಡುವುದು ಅಪರಾಧ. ಹಾಗಾದರೆ ಶಿಕ್ಷೆಯನ್ನು ನೀಡದೇ ಶಿಕ್ಷಣ ಪಡೆಯುವ ಇಂದಿನ ಕಾಲದಲ್ಲಿ ವಿದ್ಯಾರ್ಥಿ ತನ್ನ ಮನಸ್ಸಿಗೆ ಬಂದ ರೀತಿಯಲ್ಲಿ ನಡೆದುಕೊಳ್ಳುತ್ತಾನೆ. ಮೊದಲು ತರಗತಿಗಳಿಗೆ ಸರಿಯಾಗಿ ಬರದೇ ಇರುವುದು, ಬಂದರು ಆಸಕ್ತಿಯಿಂದ ಪಾಠ [illegible]ಚನಗಳನ್ನು ಕೇಳದೆ ಇರುವುದು. ಕಾಲೇಜ್ ಎಂದರೆ ಕೇವಲ ಕಲರ್‌ಫುಲ್ ಜೀವನ, ಫ್ಯಾಷನ್ ಜೀವನ ಎಂದು ತಿಳಿದುಕೊಂಡಿದ್ದಾರೆ. ಅವರಿಗೆ ಹೇಳುವವರು ಕೇಳುವವರು ಯಾರೂ ಇಲ್ಲವೆಂದು ತಾತ್ಸಾರ ಮನೋಭಾವ, ಪ್ರೀತಿ ಪ್ರೇಮದ ಹುಚ್ಚು ಹೊಳೆಯಲ್ಲಿ ತೇಲಿಹೋಗಿ ಉನ್ನತ ಶಿಕ್ಷಣದ ಗುರಿ ಉದ್ದೇಶಗಳನ್ನು ಮರೆತು ಬೀಡುವುದು. ತಂದೆ – ತಾಯಿಗಳಿಂದ ಹೇಗಾದರೂ ಮಾಡಿ ಕಾಡಿಸಿ – ಪೀಡಿಸಿ ಅವರಿಂದ ಹಣ ಪಡೆದು ಮೋಜು ಮಜಾ ಮಾಡುವುದರಲ್ಲಿ ಕಾಲ ಕಳೆಯುವರು. ವಿದ್ಯಾರ್ಥಿಗಳು ತಮ್ಮ ಉನ್ನತ ಶಿಕ್ಷಣದ ಬಗ್ಗೆ ಹೆಚ್ಚು ಗಮನಕೊಡುತ್ತಿಲ್ಲಾ ಎಂದು ಹೇಳಬಹುದು. ಅವರಿಗೆ ಉನ್ನತ ಶಿಕ್ಷಣದ ಮಹತ್ವ ತಿಳಿದಿಲ್ಲ. ಶಿಕ್ಷಕರು ಕೂಡಾ ಕೇವಲ ಯಾಂತ್ರಿಕ ಬದುಕಿಗೆ ಒಗ್ಗಿಕೊಂಡಿರುವಂತೆ ತಾವಾಯಿತು. ತಮ್ಮ ಒಂದು ಘಂಟೆಯ ಉಪನ್ಯಾಸವಾಯಿತು ಎಂಬಂತೆ ಇಪ್ಪತ್ತು ವರ್ಷದ ಹಳೆಯ ನೋಟ್ಸಗಳನ್ನು ಓದಿ ಹೇಳುವುದು. ಕೇವಲ ಧಾಂಬಿಕ ಬದುಕನ್ನು ನಡೆಸುವುದು. ಹಾಗೆ ಪಾಠ ಮಾಡಿ ಹೋಗುವುದರಲ್ಲಿಯೇ ಕಾಲ ಕಳೆದರೆ ಆ ವಿದ್ಯಾರ್ಥಿಯ ಜ್ಞಾನದ ಭವಿಷ್ಯದ ಕಡೆಗೆ ಗಮನ ಹರಿಸಲು ಸಾಧ್ಯವಾಗುವುದಿಲ್ಲ. ಇನ್ನೂ ವಿದ್ಯಾರ್ಥಿಗೆ ನಯ–ವಿನಯ, ವಿಧೇಯತೆ ನಡತೆ–ನಡುವಳಿಕೆಗಳು ಎಂಬ ಇದರ ಅರ್ಥ ಕೂಡಾ ಗೊತ್ತಿಲ್ಲ. ಜ್ಞಾನದ ದಾಹವಂತೂ ಇಲ್ಲವೇ ಇಲ್ಲ. ಸರಕಾರವು ನೀಡುವ ಉಪಯೋಗಗಳನ್ನು ದುರುಪಯೋಗ ಪಡೆದುಕೊಳ್ಳುವುದು. ಸರಕಾರವು ನೀಡುವ ವಿದ್ಯಾರ್ಥಿ ವೇತನಕ್ಕಾಗಿ ಕಾಲೇಜಿನ ಪ್ರವೇಶ ಪಡೆಯುವ, ಬಸ್ ಸೌಲಭ್ಯಗಳನ್ನು ಪಡೆದುಕೊಳ್ಳಲು (ಬಸ್ ಪಾಸ್‌ಗಳನ್ನು) ಪಡೆದು ಊರಿಂದ ಕಾಲೇಜಿಗೆ ಕಾಲೇಜಿಂದ ಊರಿಗೆ ತಿರುಗಾಡಲು ಅನುಕೂಲವಾಗಿದೆ. ಆದರೆ ಅದರಿಂದ ನಿರಂತರ ಶಿಕ್ಷಣ ದೊರೆಯುತ್ತಿಲ್ಲ. ಇಂದು ಎಷ್ಟೋ ಜನ ವಿದ್ಯಾರ್ಥಿಗಳು ಬಸ್ ನಿಲ್ದಾಣಗಳಲ್ಲಿ ಗುಂಪು ಗುಂಪಾಗಿ ನಿಂತು ಮಜಾ ಮಾಡಲು ಬಸ್ ಪಾಸ್‌ಗಳು ಸಹಾಯಕಾರಿಯಾಗಿವೆ. ಮಹಾವಿದ್ಯಾಲಯಗಳಲ್ಲಿ ಪಠ್ಯೇತರ ಚಟುವಟಿಕೆಗಳಂತೂ ವಿದ್ಯಾರ್ಥಿಗಳ ಪಾಲಿಗೆ ಬಿಸಿಲುಗುದುರೆಗಳಾಗಿವೆ. ಏಕೆಂದರೆ ಅಂದು ಭಾಷಣ, ಹಾಡು, ಅಭಿನಯ, ಚರ್ಚೆ, ರಸಪ್ರಶ್ನೆ, ಪ್ರವಾಸ, ಎನ್.ಸಿ.ಸಿ., ಎನ್.ಎಸ್.ಎಸ್., ಸ್ಕೌಟ್ ಮತ್ತು ಗೈಡ್ಸ್, ಚುನಾವಣೆ, ಆಶುಭಾಷಣ, ನಾಯಕತ್ವ ತರಬೇತಿ, ಯುವಜನೋತ್ಸವ, ವನಭೋಜನ ಮುಂತಾದ ಚಟುವಟಿಕೆಗಳಂತೂ ವರ್ಷಪೂರ್ತಿ ನಡೆಯುತ್ತಿದ್ದವು. ಆದರೆ ಇಂದು ಆ ಚಟುವಟಿಕೆಗಳು ಕೇವಲ ಹೆಸರಿಗೆ ಮಾತ್ರ ಇರುವುದು ದುರಂತದ ಸಂಗತಿ. ಏಕೆಂದರೆ ಸೆಮಿಸ್ಟರ್ ಪದ್ಧತಿಯನ್ನು ಶಿಕ್ಷಣದಲ್ಲಿ ಜಾರಿಗೆ ತಂದಿರುವುದರಿಂದ ಅವಸರ ಅವಸರವಾಗಿ ಪಾಠ ಮುದಿಸುವ ಮೇಸ್ತ್ರಿಗೆ ಈ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳನ್ನು ತೊಡಗಿಸಬೇಕೆಂಬ ಹಂಬಲವಿಲ್ಲದೆ ಕೇವಲ ಪಾಠದ ಕಡೆಗೆ ಗಮನ ನೀಡಿದರೆ ವಿದ್ಯಾರ್ಥಿಗಳಿಗೂ ಸೆಮಿಸ್ಟರ್ ಪರೀಕ್ಷೆ ಮುದಿಸಿದರೆ ಸಾಕು ಅದೇ ನಮ್ಮ ದೊಡ್ಡ ಸಾಧನೆ ಎಂದು ತಿಳಿದು ಕೊಳ್ಳುವುದರಿಂದ ದೇಶದ ಬೆನ್ನೆಲುಬಾಗಿ ಯುವಕರು ಸತ್ವಹೀನರಾಗಿ ಹೊರ ಹೊಮ್ಮುತ್ತಿದ್ದಾರೆ. ಯುವಕರು ಗ್ರಂಥಾಲಯದಲ್ಲಿ ಓದದೇ ಇರುವುದು ಮತ್ತೆ ಕೆಲವು ಪುಸ್ತಕಗಳ ಕೊರತೆ ಮುಂತಾದವುಗಳು ಕಾರಣಗಳಿವೆ.

ಇನ್ನು ಕಾಲ ಬದಲಾದಂತೆ ನಮ್ಮ ಶಿಕ್ಷಣ ಪದ್ಧತಿಗಳು ಬೋಧನಾ ವಿಧಾನಗಳು ಬದಲಾಗಬೇಕು. ಕೇವಲ ಸಂಪ್ರದಾಯವಾದಿಗಳಂತೆ ಚಾಕ್ ಮತ್ತು ಟಾಕ್ ಪದ್ಧತಿಯಲ್ಲಿ ಶಿಕ್ಷಣವನ್ನು ನೀಡುವುದಕ್ಕಿಂತ ಆಧುನಿಕ ಸೌಲಭ್ಯವನ್ನು ಒಳಗೊಂಡ ಬೋಧನಾ ಉಪಕರಣಗಳು. ಉದಾ : ಓ.ಎಚ್.ಪಿ., ಎಲ್.ಸಿ.ಡಿ. ಪ್ರಯೋಗಾಲಯ ಉಪಕರಣಗಳು, E-Learning ಮುಂತಾದ ಪದ್ಧತಿಗಳ ಮೂಲಕ ಶಿಕ್ಷಣವನ್ನು ನೀಡಿದರೆ ವಿದ್ಯಾರ್ಥಿಗಳಿಗೆ ಕಲಿಯಲು ಆಸಕ್ತಿ ಹೆಚ್ಚುತ್ತದೆ. ಹೊಸ ಹೊಸ ವಿಚಾರ ಧಾರೆಗಳು ಸಂಶೋಧನಾ ವಿಷಯಗಳು ಯೋಜನಾ ವರದಿಗಳು ಮುಂತಾದವುಗಳಲ್ಲಿ ವಿದ್ಯಾರ್ಥಿಗಳು ಪಾಲ್ಗೊಳ್ಳುವಂತೆ ಮಾರ್ಗದರ್ಶನ ಮಾಡುವುದು ಅತೀ ಅವಶ್ಯಕ. ಕೆಲವು ಕಾಲೇಜುಗಳಲ್ಲಿ (ಸರಕಾರಿ) ಶಿಕ್ಷಕರ ಕೊರತೆ, ಬೋಧನಾ ಉಪಕರಣ ಪೀಠೋಪಕರಣಗಳು ತರಬೇತಿ ಹೊಂದಿದ ಶಿಕ್ಷಕರ ಕೊರತೆ, ಕುಡಿಯುವ ನೀರಿನ ಸಮಸ್ಯೆ, ಶೌಚಾಲಯ ವ್ಯವಸ್ಥೆ

– 27ನೇ ಪುಟಕ್ಕೆ ಮುಂದುವರೆದುದು

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/39712

– 7 ನೇ ಪುಟದಿಂದ ಮುಂದುವರೆದುದು

ಉಪಹಾರ ಗೃಹ, ಮುಂತಾದ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಗ್ರಾಮೀಣ ಪ್ರದೇಶಗಳಲ್ಲಿರುವ ಕಾಲೇಜು ವಿದ್ಯಾರ್ಥಿಗಳಿಗೆ ಈ ಸೌಲಭ್ಯಗಳು ಮರೀಚಿಕೆಯಾಗಿವೆ.

ಇನ್ನೂ ಶಿಕ್ಷಕ ಮತ್ತು ವಿದ್ಯಾರ್ಥಿಗಳ ನಡುವೆ ಸಾಮರಸ್ಯದ ಕೊರತೆ ಎದ್ದು ಕಾಣುವುದರಿಂದ ವಿದ್ಯಾರ್ಥಿಗೆ ಶಿಕ್ಷಣವು ಸರಿಯಾಗಿ ದೊರೆಯುತ್ತಿಲ್ಲ. ವಿದ್ಯಾರ್ಥಿಗಳಲ್ಲಿ ನೈತಿಕ ಅಧಃಪತನ ದುಶ್ಚಟಗಳಿಗೆ ದಾಸರಾಗುವುದು, ವಿಧೇಯತೆಯಿಂದ ನಡೆದುಕೊಳ್ಳದೇ ಇರುವುದು, ಶಿಕ್ಷಕರೆಂದರೆ ಅವರೇ ಬೇರೆ ನಾವೇ ಬೇರೆ ಎಂಬ ಅಂತರದಿಂದ ವಿದ್ಯಾರ್ಥಿ ಅಕ್ಷರಶಃ ಶಿಕ್ಷಣದಿಂದ ವಂಚಿತನಾಗುತ್ತಿದ್ದಾನೆ. ಶಿಕ್ಷಕ ತಾನು ಪಡೆದ ಸಕಲ ಜ್ಞಾನವನ್ನು ವಿದ್ಯಾರ್ಥಿಗಳಿಗೆ ಧಾರೆಯೆರೆಯಬೇಕು. ಅವನ ಜೀವನವನ್ನು ರೂಪಿಸಲು ಅವನು ಅಲ್ಪ ಮಟ್ಟಿಗೆ ಸಹಾಯ ಮಾಡಬೇಕು. ಇತನನ್ನು ವಿದ್ಯಾರ್ಥಿ ಅವನ ಕಷ್ಟ ಸುಖಗಳಿಗೆ ಸ್ಪಂದಿಸುವ ಮನೋಭಾವವನ್ನು ತೋರ್ಪಡಿಸಬೇಕು ಎಂಬ ಶಿಕ್ಷಕರು ಇಂದು ಕ...ಯಾಗಿದ್ದಾರೆ. ವಿದ್ಯಾರ್ಥಿಯು ಕೂಡಾ ಗುರುಗಳೊಂದಿಗೆ ಒಳ್ಳೆಯ ಭಾವನೆಯೊಂದಿಗೆ ಸ್ಪಂದಿಸಿ ಸರ್. ಇದು ನನ್ನ ಸಮಸ್ಯೆ, ಅದು ಬಯಕೆಯಾಗಿರಬಹುದು, ವಿಷಯದ ಸ್ಪಷ್ಟೀಕರಣವಾಗಿರಬಹುದು ಅಥವಾ ಯಾವುದೇ ಸಮಸ್ಯೆಯಿದ್ದರು ಶಿಕ್ಷಕರೊಂದಿಗೆ ಹಂಚಿಕೊಂಡು ಇದಕ್ಕೆ ಪರಿಹಾರವೇನು ? ಎಂದು ಕೇಳಿದರೆ ಯಾವ ಶಿಕ್ಷಕರು ನನ್ನಿಂದಾಗದು ಎನ್ನುವವರು ಬಹುಳ ಕಡಿಮೆ. ಆದರೆ ವಿದ್ಯಾರ್ಥಿ ಶಿಕ್ಷಕರ ಹತ್ತಿರ ಹೋಗಲು ಹಿಂಜರಿಯುತ್ತಾರೆ. ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ, ದತ್ತಿನಿಧಿ ಸೌಲಭ್ಯಗಳು ಸಮರ್ಪಕವಾಗಿ ದೊರೆಯದೆ ಇರುವುದು. ತಂದೆ –ತಾಯಿಗಳ ನಿರ್ಲಕ್ಷತನ, ಗುರು–ಹಿರಿಯರ ಯೋಗ್ಯ ಮಾರ್ಗದರ್ಶನ ಇಲ್ಲದೇ ಇರುವುದು. ಗೊತ್ತು – ಗುರಿಯಿಲ್ಲದ ವಿದ್ಯಾರ್ಥಿ ಜೀವನ, ಶಿಸ್ತು ಸಂಯತೆಯಿಲ್ಲದ ಶಿಕ್ಷಣ, ಸಾಂಪ್ರದಾಯಕ ಶಿಕ್ಷಣ ಪದ್ಧತಿ, ನೀತಿ ಶಿಕ್ಷಣ ಕೊರತೆ, ಹದಿಹರೆಯದ ಸಮಸ್ಯೆಗಳು, ಪ್ರೀತಿ–ಪ್ರೇಮ, ಚಲ್ಲಾಟಗಳಿಗೆ ತಮ್ಮ ಬಂಗಾರದಂತಹ ಜೀವನವನ್ನೇ ಹಾಳು ಮಾಡಿಕೊಳ್ಳುವುದು. ದುಶ್ಚಟಗಳಿಗೆ ಬಲಿಯಾಗಿ ಏಡ್ಸ್, ಕ್ಯಾನ್ಸರ್‌ನಂತಹ ಮಾರಕ ರೋಗಗಳಿಗೆ ಬಲಿಯಾಗುವುದು, ಓದುವ ಹವ್ಯಾಸವಂತು ಇಂದು ಮರಿಚಿಕೆಯಾಗಿದೆ. ಕೇವಲ ಸಿನೆಮಾ, ಟಿ.ವ್ಹಿ, ಮೊಬೈಲ್‌ಗಳಲ್ಲಿ ಜೀವನ ನಡೆಸುವ ಇಂದಿನ ಯುವಕರು ಪರೀಕ್ಷೆಯ ಸಮಯದಲ್ಲಿ ಕಾಪಿ ಮಾಡುವುದು , ಇಲ್ಲವೇ ಖಾಲಿ ಉತ್ತರ ಪತ್ರಿಕೆಯನ್ನು ನೀಡಿ ಮನೆಗೆ ಹೋಗುವುದು, ಹೇಗಾದರೂ ಇನ್ನೂ ಮೂರು ಅವಕಾಶಗಳು ಇವೆ, ಎಂದಾದರೂ ಒಂದು ದಿನ ತೆಗೆದುಕೊಳ್ಳುವೆ ಎಂಬ ಉಢಾಫೆ ಮನೋಭಾವನೆಯಿಂದ ವಿದ್ಯಾರ್ಥಿಯ ಜೀವನಕ್ಕೆ ಉನ್ನತ ಶಿಕ್ಷಣವೆಂದರೆ ಒಂದು ಸಮಸ್ಯೆಯಾಗಿ ಪರಿಣಮಿಸಿದೆ ಎಂದರೆ ತಪ್ಪಾಗಲಾರದು.

## ಆಕರ ಗ್ರಂಥಗಳು


- ಎಸ್. ಬಿ. ಯಾದವಾಡ : ಉನ್ನತ ಶಿಕ್ಷಣದಲ್ಲಿ ಪ್ರಚಲಿತ ಸಮಸ್ಯೆಗಳು, ಗದಗ ವಿದ್ಯಾನಿಧಿ ಪ್ರಕಾಶನ.


– 18 ನೇ ಪುಟದಿಂದ ಮುಂದುವರೆದುದು

ಆಲಾಪದ ಆರಂಭವನ್ನು ಇದೇ ಪ್ರಕಾರವಾಗಿ ಮಾಡುತ್ತಾ ಬಂದಿದ್ದೇವೆ. ಬೇರೆ ಸ್ವಸ್ಥಾನದಲ್ಲಿ ಇದೆ ಮಧ್ಯಸಪ್ತಕದ ಮಧ್ಯಮ ಸ್ವರವನ್ನು ಸೇರಿಸಿಕೊಂಡರೆ ಸ್ವರಗಳ ಒಟ್ಟು ಸಂಖ್ಯೆಯು ಹನ್ನೊಂದು ಆಗುತ್ತದೆ. ಅಂದರೆ ಮಧ್ಯಮ ಸ್ವರದವರೆಗೆ ಆಲಾಪ ಮಾಡುವುದು ದ್ವಿತೀಯ ಸ್ವಸ್ಥಾನ ಎನಿಸಿಕೊಳ್ಳುತ್ತದೆ. ಮೂರನೇ ಸ್ವಸ್ಥಾನದಲ್ಲಿ "ಪದನಿ" ಸ್ವರವನ್ನು ಸೇರಿಸಿಕೊಂಡರೆ ಸ್ವರಗಳ ಒಟ್ಟು ಸಂಖ್ಯೆ ಹದಿನಾಲ್ಕು ಆಗುತ್ತದೆ ಅಂದರೆ ಈ ಹದಿನಾಲ್ಕು ಸ್ವರಗಳಲ್ಲಿ ಸಂಚಾರ ಮಾಡುತ್ತಾ ಆಲಾಪ ಮಾಡುವುದನ್ನು ಮೂರನೇ ಸ್ವಸ್ಥಾನ ಎನ್ನುತ್ತಾರೆ. ನಾಲ್ಕನೆ ಸ್ವಸ್ಥಾನದಲ್ಲಿ ತಾರ ಸಪ್ತಕದ ಷಡ್ಜವನ್ನು ಸೇರಿಸಿಕೊಂಡು ಆಲಾಪ ಮಾಡಲಾಗುತ್ತದೆ. ಯಾವುದೇ ರಾಗ ಅಥವಾ ರಚನೆಯಎಲ್ಲಾ ಸ್ವರಗಳಲ್ಲಿ ಸಂಚಾರ ಮಾಡುವುದರಲ್ಲಿ ಆಲಾಪ ಮಾಡುವುದಕ್ಕೆ ನಾಲ್ಕನೇ ಸ್ವಸ್ಥಾನ ಎನಿಸಿಕೊಳ್ಳುತ್ತದೆ.

■■





ವಿದ್ಯಾನಿಧಿ VPG ಪ್ರಕಾಶನ ®
ಶ್ರೀ ಶಿವಕುಮಾರ ಏಜನ್ಸಿ®

ಶೈಕ್ಷಣಿಕ ಪುಸ್ತಕಗಳ ಪ್ರಕಾಶಕರು ಮತ್ತು ಮಾರಾಟಗಾರರು

ಸ್ಟೇಶನ್ ರೋಡ ಮತ್ತು 'ನನಸು' ಜೆ. ಟಿ. ಮಠ ರೋಡ,
ಗದಗ-582 101

ದೂರವಾಣಿ : 08372-237527, 277527
e-mail : vidyanidhiprakashana@gmail.com. www.vidyanidhionline.com